
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 13 Reg. No. : KARBIL / 2005 / 16123 ಸೆಪ್ಟೆಂಬರ್ - 2024 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 9 ಪ್ರಕಟಣೆ : 02-09-2024


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ತೀರ್ಥಹಳ್ಳಿ ನಿವಾಸಿ ಶ್ರೀಮತಿ ಸುಂದರಮ್ಮ ತಮ್ಮ ಪತಿ ಶ್ರೀ ರಾಮಕೃಷ್ಣ ಶಾಸ್ತ್ರಿ, ಅರಗ (ತೀರ್ಥಹಳ್ಳಿ) ಸ್ಮರಣಾರ್ಥ ತಮ್ಮ ಮಗ, ಮಂಗಳೂರು ನಿವಾಸಿ ಶಾಂಕರತತ್ವ ಅಭಿಯಾನದ ದಕ್ಷಿಣ ಕನ್ನಡ ಸಂಚಾಲಕರಾದ ಶ್ರೀ ಶ್ರೀಧರ್ ಶಾಸ್ತ್ರಿ ಮತ್ತು ಸೊಸೆ ಶ್ರೀಮತಿ ಶಾರದಾ ಶಾಸ್ತ್ರಿ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ₹ 1,00,000/- (ರೂ. ಒಂದು ಲಕ್ಷ) ನೀಡಿದ್ದಾರೆ. ಈ ಹಿಂದೆಯೂ ಅವರು ₹ 4,10,000/- ನೀಡಿದ್ದು ಒಟ್ಟು ₹ 5,10,000/- ನೀಡಿ ಒಂದು ಕೋಣೆಯನ್ನು ಪ್ರಾಯೋಜಿಸಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

ಮಂಗಳೂರು ಬಿಜೈ ನಿವಾಸಿ ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಅಧಿಕಾರಿ ಅರಿಕ್ಕಳ ಶ್ರೀ ಬಾಲಕೃಷ್ಣ ರಾವ್ ಮತ್ತು ಶ್ರೀಮತಿ ಶಾಂತಲಾ ರಾವ್ ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರು ಮುರದಲ್ಲಿರುವ 'ಶಿವಸದನ' ಹಿರಿಯ ನಾಗರಿಕರ ಹಾಗೂ ವಿಕಲ ಚೇತನರ ವಸತಿನಿಲಯಕ್ಕೆ ₹ 50,000/- ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷರುಗಳಾದ ಶ್ರೀಮತಿ ಸುಮಂಗಲಾ ಪ್ರಭಾಕರ್, ಡಾ| ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ದೇಣಿಗೆ ಸ್ವೀಕರಿಸಿದರು.




## ಮರೆಯಬಾರದ ಮರೆಯಲಾಗದ ನೆನಪುಗಳು



ಶತಮಾನದ ಹಿಂದೆ ಶ್ರೀ ಸುಬ್ರಹ್ಮಣ್ಯ ಸಭಾದ ಕಟ್ಟಡ ಹಾಗೂ ನಿವೇಶನದ ಒಟ್ಟು ಸಂಕೀರ್ಣವು ಬಹಳಷ್ಟು ದಾನಿಗಳ ಸಹಕಾರದಿಂದ ಸಮಾಜಕ್ಕೆ ಅರ್ಪಿತವಾಯಿತು. ಅವರೆಲ್ಲರ ಭಾವಚಿತ್ರಗಳನ್ನು ಆ ಕಟ್ಟಡದ ಗೋಡೆಗಳಲ್ಲಿ ಪ್ರದರ್ಶಿಸಲಾಗಿತ್ತು. ಕಾಲಾಂತರದಲ್ಲಿ ಶಿಥಿಲವಾದ ಕಟ್ಟಡದಲ್ಲಿದ್ದ ಕೆಲವೊಂದು ಭಾವಚಿತ್ರಗಳು ಬಣ್ಣ ಕಳೆದುಕೊಂಡು ಗುರುತಿಸಲು ಅಸಾಧ್ಯವಾಗಿದ್ದುವು. ಇವುಗಳ ಪೈಕಿ ಹೆಚ್ಚಿನ ಭಾವಚಿತ್ರಗಳನ್ನು ಗುರುತಿಸಿ ಮರಳಿ ಸುಸ್ಥಿತಿಯಲ್ಲಿರಿಸಲಾಗಿದೆ. ಆದರೆ ಈ ಕೆಳಗಿನ ಭಾವಚಿತ್ರದಲ್ಲಿರುವ ದಾನಿ ಮಹಿಳೆಯನ್ನು ಗುರುತಿಸಲು ಅಸಾಧ್ಯವಾಗಿದೆ. ಈ ದಿಸೆಯಲ್ಲಿ ಈ ಮಹಾದಾನಿ ಮಹಿಳೆಯನ್ನು ಗುರುತಿಸಿ, ಸಹಕರಿಸಿದ್ದಲ್ಲಿ ನಾವು ಆಭಾರಿಗಳು.

ಸಂಪರ್ಕಿಸಿ : ಕರುಣ್ ರಾವ್ ಬೆಳ್ಳೆ ✆ : 7337634359

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಸಮಾಜ ಬಾಂಧವರೇ,



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಷಂಪ್ರತಿಯಂತೆ
ತಾರೀಕು **15-09-2024**ನೇ ರವಿವಾರದಂದು
**ಶ್ರೀಕೃಷ್ಣ ಜನ್ಮಾಷ್ಟಮಿಯನ್ನು**
ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.



ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತಿದ್ದೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು

ಅದೇ ದಿನ ಬೆಳಗ್ಗೆ ಗಂಟೆ 10-00ರಿಂದ ಶ್ರೀ ಸುಬ್ರಹ್ಮಣ್ಯ ಸಭಾ, ರೋಟರಿ ಕ್ಲಬ್ ಮಂಗಳೂರು ಹಿಲ್‌ಸೈಡ್, BNI ADI, EURO KIDS ಮತ್ತು ರೆಡ್‌ಕ್ರಾಸ್ ಸಂಸ್ಥೆ ವತಿಯಿಂದ **'ರಕ್ತದಾನ ಶಿಬಿರ'** ಹಾಗೂ ದಿಶಾ ಆಪ್ಟಿಕಲ್ಸ್ ವತಿಯಿಂದ **'ಉಚಿತ ನೇತ್ರ ತಪಾಸಣೆ'** ಮತ್ತು ಶ್ರೀನಿವಾಸ ಡೆಂಟಲ್ ಕಾಲೇಜು ವತಿಯಿಂದ **'ಉಚಿತ ದಂತ ತಪಾಸಣೆ ಶಿಬಿರ'** ನಡೆಯಲಿದೆ.

### ಕಾರ್ಯಕ್ರಮಗಳು

ಬೆಳಗ್ಗೆ 7-30ರಿಂದ 8-30 : ವಿವಿಧ ಪಾರಾಯಣಗಳು

ಬೆಳಗ್ಗೆ 8-30ರಿಂದ : ಉಪಾಹಾರ

10-00ರಿಂದ : ಭಗವದ್ಗೀತೆ ಕಂಠಪಾಠ ಸ್ಪರ್ಧೆ

10 ವರ್ಷದ ಕೆಳಗಿನ ಮಕ್ಕಳಿಗೆ
ಭಗವದ್ಗೀತೆಯ ಧ್ಯಾನಶ್ಲೋಕ ಸ್ಪರ್ಧೆ

10-18 ವರ್ಷದ ವಿಭಾಗ
15ನೇ ಅಧ್ಯಾಯದ ಆರಂಭದ 10 ಶ್ಲೋಕಗಳು

18 ವರ್ಷ ಮೇಲ್ಪಟ್ಟು
15ನೇ ಅಧ್ಯಾಯದ ಆರಂಭದ 10 ಶ್ಲೋಕಗಳು

11-00ರಿಂದ : **ಮುದ್ದುಕೃಷ್ಣ ವೇಷ ಸ್ಪರ್ಧೆ**
3 ವರ್ಷದೊಳಗಿನ ವಿಭಾಗ
3ರಿಂದ 8 ವರ್ಷದೊಳಗಿನ ವಿಭಾಗ
8ರಿಂದ 12 ವರ್ಷದೊಳಗಿನ ವಿಭಾಗ

11-30ರಿಂದ : ಭಕ್ತಿಗೀತೆ ಸ್ಪರ್ಧೆ
12ರಿಂದ 30 ವರ್ಷದ ಒಳಗಿನ ವಿಭಾಗ
30 ವರ್ಷ ಮೇಲ್ಪಟ್ಟವರ ವಿಭಾಗ

ಚಕ್ಕುಲಿ ಸಂಖ್ಯೆ ಊಹನೆ ಸ್ಪರ್ಧೆ (ಮುಕ್ತ ವಿಭಾಗ)

ಮಧ್ಯಾಹ್ನ 12-15ರಿಂದ : ಮಡಕೆ ಒಡೆಯುವ ಸ್ಪರ್ಧೆ

ಮಧ್ಯಾಹ್ನ 1-00ರಿಂದ : ಭೋಜನ

ಮಧ್ಯಾಹ್ನ 2-00ರಿಂದ : ಶಂಖ ಊದುವ ಸ್ಪರ್ಧೆ
16 ವರ್ಷದ ಒಳಗಿನ ವಿಭಾಗ
16 ವರ್ಷ ಮೇಲ್ಪಟ್ಟವರ ವಿಭಾಗ

2-30ರಿಂದ : ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆ

3-00ರಿಂದ : **ಸಾಂಸ್ಕೃತಿಕ ಕಾರ್ಯಕ್ರಮಗಳು**

**ಬಹುಮಾನದ ಪ್ರಾಯೋಜಕರು**

ಶ್ರೀಮತಿ ಸೌಭದ್ರಾ ಸದಾಶಿವ ಶಾಸ್ತ್ರಿ
ಮತ್ತು ಶ್ರೀಮತಿ ರತ್ನಾ ರಾಜೇಂದ್ರ

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ಸಂಪರ್ಕಿಸಿ :

ಶ್ರೀಮತಿ ಕುಸುಮಾ ನವೀನ್‌ಕುಮಾರ್ - 9480760904 | ಶ್ರೀಮತಿ ಪುಷ್ಪಾ ಶ್ರೀನಿವಾಸ್ - 9739155359
ಶ್ರೀ ಅನಿಲ್ ನೆಲ್ಲಕುಂಜೆ - 9448815172 | ಶ್ರೀ ಸುರೇಶ್ ಕಡಬ - 9972760673

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

ಎಲ್. ನಂ. 366, 'ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್'
ಬಿಜೈ ರಸ್ತೆ, ಮಂಗಳೂರು - 575 003
✆ : 9880968032 / 0824 - 2982095

ಸ್ಥಾಪನೆ : 1936

ನಮ್ಮ ಸಂಘದ 2023 - 2024ನೇ ಸಾಲಿನ
**87ನೇ ವಾರ್ಷಿಕ ಮಹಾಸಭೆಯನ್ನು**
ತಾರೀಕು 15-09-2024ನೇ ಆದಿತ್ಯವಾರ
ಪೂರ್ವಾಹ್ನ ಗಂಟೆ 11-00ಕ್ಕೆ ಸರಿಯಾಗಿ
ಶ್ರೀ ಕರುಣ್ ರಾವ್ ಬೆಳ್ಳೆ ಇವರ ಅಧ್ಯಕ್ಷತೆಯಲ್ಲಿ
ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಭವನ'ದಲ್ಲಿ
ಏರ್ಪಡಿಸಲಾಗಿದೆ. ಸಂಘದ ಸದಸ್ಯರೆಲ್ಲರೂ ಆಗಮಿಸಿ,
ಮಹಾಸಭೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

ಸಾಯಿಪ್ರಸಾದ್ ಎಮ್., ಮುಖ್ಯ ಕಾರ್ಯನಿರ್ವಹಣಾಧಿಕಾರಿ

# ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು • ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

: 7795116598 : 9343361618 e-mail : jnanashakthisss@gmail.com


ಓಂ

॥ ಶ್ರೀ ವಿಷ್ಣುಮೂರ್ತಿ ಪ್ರಸೀದತು ॥

॥ ಶ್ರೀ ಮಹಾಗಣಪತಿ ಪ್ರಸನ್ನಃ ॥ ಶ್ರೀ ಶಾಸ್ತಾವು ಪ್ರಸನ್ನಃ ॥

## ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನ

### ಪಡುಬಿದ್ರಿ

**ಭಕ್ತಾಭಿಮಾನಿಗಳೇ,**

ಇದೇ ಬರುವ ದಿನಾಂಕ **16-08-2024**ನೇ ಶುಕ್ರವಾರ ಸಿಂಹ ಸಂಕ್ರಮಣದಿಂದ ದಿನಾಂಕ **16-09-2024**ನೇ ಸೋಮವಾರ ಕನ್ಯಾ ಸಂಕ್ರಮಣದವರೆಗೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ

## ಸೋಣಾರತಿ - ಹೂವಿನ ಪೂಜೆ

ಶ್ರೀ ದೇವಳದ ತಂತ್ರಿಯವರಾದ **ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿ**ಯವರ ಮಾರ್ಗದರ್ಶನದಲ್ಲಿ ನಡೆಯಲಿದ್ದು, ಭಕ್ತಾದಿಗಳು ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಆಡಳಿತ ಮಂಡಳಿ,** ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು

ಪೂಜೆ ಮಾಡಿಸುವವರು ಬರುವಾಗ ಹೂ, ಹಣ್ಣುಕಾಯಿ ಮತ್ತು ಪೂಜೆಗೆ ರೂ. 500/-ರಂತೆ ತರಬೇಕು.

**ಪೂಜೆಯ ಸಮಯ : ಪ್ರತಿ ದಿನ ಸಂಜೆ ಗಂಟೆ 6-30ರಿಂದ 7-30**

*ಸೇವೆ ಮಾಡಿಸುವವರು ಈ ಕೆಳಗಿನ ಮೊಬೈಲ್ ನಂಬರ್‌ಗಳನ್ನು ಸಂಪರ್ಕಿಸಿ*

**ದಿವಾಕರ ರಾವ್ : 9902169119 ಸುಧಾಕರ ಬೆಳ್ಳೆ : 9845193103**

**BANK DETAILS :**

Name : **Padebettu Vishnumoorthy Temple**

Bank : **Canara Bank** Branch : **Padubidri**

A/c. No. : **01382200051328** IFSC : **CNRB0010138**

ದಿನಾಂಕ **16-09-2024**ನೇ ಸೋಮವಾರ ಕನ್ಯಾ ಸಂಕ್ರಮಣದಂದು **ದೇವರಿಗೆ ಲಕ್ಷ ತುಳಸಿ ಅರ್ಚನೆ** ಹಾಗೂ **ಪುಷ್ಪಾರ್ಚನೆ** ನಡೆಯಲಿದೆ.

## ಪ್ರಕಟಣೆ

'ಶಿವಸದನ' ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯದ ಹಿರಿಯ ನಾಗರಿಕರ ವಸತಿನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲ ಚೇತನರ ವಿಶೇಷ ಶಾಲೆಗೆ (Day Care) ಪುತ್ತೂರಿನ ಆಸುಪಾಸಿನ ಮಕ್ಕಳ ದಾಖಲಾತಿ ತಾರೀಕು 1-6-2024ರಿಂದ ಆರಂಭವಾಗಿದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ. ಮಿತದರದಲ್ಲಿ ಸುಸಜ್ಜಿತ ಶಾಲೆಯಲ್ಲಿ ಪರಿಣಿತರಿಂದ ಸೇವೆ, ಆರೈಕೆ, ಆಟ, ಪಾಠವನ್ನು ಒದಗಿಸಲಾಗುವುದು. ಆವಶ್ಯಕತೆ ಇರುವವವರು ಮಾಹಿತಿ ಪಡೆಯಲು ವಿನಂತಿ. ನಿವಾಸಿ ಸೌಲಭ್ಯವೂ ಲಭ್ಯವಿದೆ.

**ಹೆಚ್ಚಿನ ಮಾಹಿತಿ :** ಶ್ರೀ ಕರುಣ್ ರಾವ್ ಬೆಳ್ಳೆ – 7337634359

ಶ್ರೀಮತಿ ಸುಮಂಗಲಾ ಪ್ರಭಾಕರ್ - 9844242442 ಶ್ರೀ ಪಿ. ಶ್ರೀಕಾಂತ್ ರಾವ್ - 7795116598

## ಎಂ.ಜೆ.ಎಫ್. ಹರ್ಷಕುಮಾರ್ ಮತ್ತು ಕನಕವಲ್ಲಿ ಎಚ್. ಕೇದಗೆ ದಂಪತಿಗಳಿಗೆ 'ಲಯನ್ಸ್ ಪ್ರಶಸ್ತಿ'



ತಾರೀಕು 6–7–2024ರಂದು 'ಮುಲ್ಕಿ ಸುಂದರರಾಮ್ ಶೆಟ್ಟಿ ಸಭಾಂಗಣ'ದಲ್ಲಿ ಜರಗಿದ 'ಲಯನ್ಸ್ ಪ್ರಶಸ್ತಿ ಪ್ರದಾನ' ಸಮಾರಂಭದಲ್ಲಿ ದಕ್ಷಿಣ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳನ್ನೊಳಗೊಂಡ ಲಯನ್ಸ್ ಜಿಲ್ಲೆ 37/ಡಿ– ಅಂತರ್ರಾಷ್ಟ್ರೀಯ ಸೇವಾಸಂಸ್ಥೆ ಇದರಲ್ಲಿ ಲಯನ್ಸ್ ಎಂ.ಜೆ.ಎಫ್. ಹರ್ಷಕುಮಾರ್ ಕೇದಗೆ ಮತ್ತು ಲಯನ್ ಕನಕವಲ್ಲಿ ಕೇದಗೆ ದಂಪತಿಗಳಿಗೆ ಜಿಲ್ಲಾ ಗವರ್ನರ್ ಡಾ। ಮೆಲ್ವಿನ್ ಡಿ'ಸೋಜ ದಂಪತಿಗಳು ನೂರಾರು ಜನರ ಕರತಾಡನದೊಂದಿಗೆ ತುಂಬಿದ ಸಭೆಯಲ್ಲಿ 'Diamond Award' ನೀಡಿ ಗೌರವಿಸಿದರು. 39 ವರುಷಗಳಿಂದ ಲಯನ್ಸ್ ಅಂತರ್ರಾಷ್ಟ್ರೀಯ ಸೇವಾ ಸಂಸ್ಥೆಯ ಸದಸ್ಯರಾಗಿದ್ದು ಹಲವಾರು ಸೇವಾ ಕಾರ್ಯಗಳನ್ನು ಮಾಡಿ ಈ ಪ್ರಶಸ್ತಿಗೆ ಭಾಜನರಾಗಿರುತ್ತಾರೆ ಎಂದು ಶ್ಲಾಘಿಸಿದರು.


Celebrating 60th Year 1963-2023

RAJESH POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

NAVADURGA FINANCIALS Estd 1998
SCAN ME TO KNOW MORE!!!

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)




## ದಿ। ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ

ಕೋಂ. ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ
ಕುಳಾಯಿ - 575 019 ಮೊಬೈಲ್ : 8762235801

### ಪ್ರತಿಭಾ ಪುರಸ್ಕಾರ

2023-24ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ / ವಿದ್ಯಾರ್ಥಿನಿಯರನ್ನು ದಿನಾಂಕ 20-10-2024ನೇ ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ / ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 30-9-2024ರ ಒಳಗಡೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

*ಕೆ. ಸದಾಶಿವ ಶಾಸ್ತ್ರಿ*

## ಸಮಾಜದ ಹೆಮ್ಮೆಯ ಸ್ತ್ರೀರೋಗ ತಜ್ಞೆ ಡಾ। ಸಂಧ್ಯಾ



ಬೆಂಗಳೂರು ಗಾಂಧಿನಗರದಲ್ಲಿರುವ ಸರ್ಕಾರಿ ಶ್ರೀ ಜಯಚಾಮರಾಜೇಂದ್ರ ಆಯುರ್ವೇದ ಆಸ್ಪತ್ರೆಯಲ್ಲಿ 35 ವರ್ಷದ ನಂತರ ಹೆರಿಗೆ ಮಾಡಲಾಗಿದೆ. ಈ ಹೆರಿಗೆಯನ್ನು ಮಾಡಿದವರು ನಮ್ಮ ಸಮಾಜದವರೇ ಆದ ಡಾ। ಸಂಧ್ಯಾ. ಈ ಕಾಲೇಜಿನಲ್ಲಿ ಸ್ತ್ರೀರೋಗ ತಜ್ಞೆ ಮತ್ತು ಉಪನ್ಯಾಸಕಿಯಾಗಿರುವ ಡಾ। ಸಂಧ್ಯಾ ಅವರು ಯಶಸ್ವಿಯಾಗಿ ಹೆರಿಗೆ ಮಾಡಿಸಿಕೊಟ್ಟಿದ್ದು ತಾಯಿ ಮತ್ತು ಮಗು ಆರೋಗ್ಯವಾಗಿದ್ದಾರೆ.

ಮೈಸೂರು ಸರ್ಕಾರಿ ಆಯುರ್ವೇದ ಕಾಲೇಜಿನಲ್ಲಿ ಪದವಿ ಮತ್ತು ತಿರುವನಂತಪುರಂ ಸರ್ಕಾರಿ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರಿಗೆ 25 ವರ್ಷಗಳ ಉಪನ್ಯಾಸಕ ವೃತ್ತಿಯ ಅನುಭವವಿದೆ. ಇಲ್ಲಿಯವರೆಗೂ ಎರಡು ಸಾವಿರಕ್ಕೂ ಹೆಚ್ಚು ನಾರ್ಮಲ್ ಡೆಲಿವರಿ ಮಾಡಿರುವ ಇವರು ಸರ್ಕಾರಿ ಮಹಾವಿದ್ಯಾಲಯ ಜಯಚಾಮರಾಜೇಂದ್ರ ಆಯುರ್ವೇದ ಆಸ್ಪತ್ರೆಯಲ್ಲಿ ಪ್ರಸೂತಿ ತಂತ್ರ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥೆಯಾಗಿದ್ದಾರೆ. ಕಾವು ನಿಧಿಮುಂಡ ವೆಂಕಟ್ ರಾವ್ ಮತ್ತು ಕಾವೇರಿ ಅಮ್ಮ ಅವರ ಮಗಳಾಗಿರುವ ಸಂಧ್ಯಾ ಇವರು ಪತಿ ಶ್ರೀ ನಾಗರಾಜ್ ಇವರೊಂದಿಗೆ 'ಕುಮಾರಸ್ವಾಮಿ ಲೇಔಟ್'ನಲ್ಲಿ ನೆಲೆಸಿದ್ದಾರೆ.

## ಶ್ರೀಮತಿ ಕುಸುಮಾ ನವೀನ್ ಕುಮಾರ್ ತಂಡಕ್ಕೆ ಗ್ರೂಪ್ ಡಾನ್ಸ್‌ನಲ್ಲಿ ಪ್ರಥಮ ಬಹುಮಾನ




ಏ.ಜೆ. ಆಸ್ಪತ್ರೆ ಮತ್ತು ವಯ ವಿಕಾಸ್ ಬೆಂಗಳೂರು ಇವರು ಅಂಬೇಡ್ಕರ್ ಭವನದಲ್ಲಿ ಹಿರಿಯ ನಾಗರಿಕರ ಪ್ರತಿಭಾ ಪುರಸ್ಕಾರ, ಸಂಗೀತ ಮತ್ತು ಡಾನ್ಸ್ ಸ್ಪರ್ಧೆ ಏರ್ಪಡಿಸಿದ್ದರು. ಇದರಲ್ಲಿ ಶ್ರೀಮತಿ ಕುಸುಮಾ ನವೀನ್ ಕುಮಾರ್ ತಂಡ ಗ್ರೂಪ್ ಡಾನ್ಸ್‌ನಲ್ಲಿ ಪ್ರಥಮ ಬಹುಮಾನ ಪಡೆದರು. ಏ.ಜೆ. ಆಸ್ಪತ್ರೆಯ ಡಾ। ಅಮಿತ್ ಮಾರ್ಲ ಬಹುಮಾನ ನೀಡಿದರು.


*Prop. : P. Srikanth Rao* Mobile : 9343361618

**M/s. SAMARPAN**

*HOUSE OF STATIONERY*

"Vijaya Nivas", Opp. Pio Mall
Bejai Church Road, Mangalore - 4



## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003
✆ : 9880968032 / 0824-2982095

**ಶಾಖೆಗಳು**

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454

ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955

ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944

ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803

ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800

ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955

ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344

ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955

ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955

ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ
✆ : 9731405917

ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344

ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575

### ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 364 ದಿನಗಳ ವರೆಗೆ | - | 6% |
| 1 ವರ್ಷದಿಂದ 3 ವರ್ಷದ ವರೆಗೆ | - | 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ-ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**

ಕನಿಷ್ಠ ಠೇವಣಿ : ರೂ. **10,000/-** ಠೇವಣಿ ಅವಧಿ : **88** ತಿಂಗಳು

ವಿಶೇಷ ಬಡ್ಡಿದರ : **9.6%**



Prop. : SUDHAKAR BELLE
✆ : 9845193103/ 9481563103

**KARAN DIGITAL STUDIO**

Sadasukh Building, Nr. Postoffice, Padubidri - 574 111
Opp. Busstand Belman

All Marriage & Other functions Photography & Videography Available



ಪತ್ರಿಕೆಗೆ ಶುಭ ಬಯಸುವ -

**ಇನ್ನ ಶ್ರೀನಿವಾಸ ರಾವ್ ಹಾಗೂ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್ ಮತ್ತು ಕುಟುಂಬ**

ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ವಾತಂತ್ರ್ಯ ದಿನಾಚರಣೆ



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 12–8–2024ನೇ ಸೋಮವಾರ ಭಜನಾ ಗುರುಗಳಾದ ಪೊಳಲಿ ಶ್ರೀ ಸುಬ್ಬರಾವ್ ನೇತೃತ್ವದಲ್ಲಿ 'ಶ್ರೀ ಶಾರದಾಂಬ ಭಜನಾ ಮಂಡಳಿ', ಮಂಗಳೂರು ಹಾಗೂ 'ಶಿವರಂಜನಿ ಕಲಾಕೇಂದ್ರ', ಪೊಳಲಿ ಹಾಗೂ ಬೊಕ್ಕಸ ಇದರ ಸದಸ್ಯರಿಂದ ಭಜನಾ ಕಾರ್ಯಕ್ರಮ ಜರಗಿತು.

ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಶೃಂಗೇರಿಯ ಭಜನೆಗಳು ಹಾಗೂ ದೇಶಭಕ್ತಿಗೀತೆಗಳೊಂದಿಗೆ, ರಾಷ್ಟ್ರಧ್ವಜಗಳಿಂದ ಸಿಂಗರಿಸಿದ ವೇದಿಕೆಯಲ್ಲಿ ಸುಮಾರು 50 ಜನರು ಉತ್ಸಾಹದಿಂದ ಭಾಗವಹಿಸಿದರು.

ಶ್ರೀಮತಿ ವೀಣಾ ಜಿ. ರಾವ್, ಶ್ರೀಮತಿ ಸ್ನೇಹಲತಾ ಡಿ. ರಾವ್, ಶ್ರೀಮತಿ ಕರುಣ ಬಿ. ರಾವ್ ಮತ್ತು ಡಾ। ಜಯಲಕ್ಷ್ಮಿ ಇವರು ಸ್ವಾತಂತ್ರ್ಯದಿನದ ಬಗ್ಗೆ ಮಾತನಾಡಿ ಕಷ್ಟ–ಕಾರ್ಪಣ್ಯ, ವೀರಯೋಧರ ಸಾಹಸ ತ್ಯಾಗದ ಬಗ್ಗೆ ಕಳೆದ ದಿನಗಳನ್ನು ಮತ್ತೊಮ್ಮೆ ಮೆಲುಕು ಹಾಕಿದರು. ವಿವಿಧ ಬವಣೆಗಳನ್ನು ಎದುರಿಸಿದರೂ, ಪ್ರತಿಯೊಬ್ಬರೂ ಶ್ರದ್ಧೆ, ಸಮರ್ಪಣೆ, ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಬಲಿಷ್ಠ ಶಾಂತಿಯುತ ರಾಷ್ಟ್ರವಾಗಿ ರೂಪಿಸಬಹುದು. ಮುಂದಿನ ಪೀಳಿಗೆಗೆ ಉತ್ತಮ ಭವಿಷ್ಯವನ್ನು ನೀಡಬಹುದು ಎಂದು ವಿವರಿಸಿದರು. ಗುರುಗಳಾದ ಪೊಳಲಿ ಶ್ರೀ ಸುಬ್ಬರಾವ್ ಇವರು ನಮ್ಮ ಕಾರ್ಯಕ್ರಮದ ಬಗ್ಗೆ ಪ್ರೋತ್ಸಾಹಪೂರ್ವಕವಾಗಿ ಮಾತನಾಡುತ್ತಾ ನಾವು ಬೇರೆ ಯಾವುದೇ ಆಚರಣೆಗಳನ್ನು ಮಾಡಿದರೂ, ಸ್ವಾತಂತ್ರ್ಯ ದಿನ, ಪ್ರಜಾಪ್ರಭುತ್ವ ದಿನಗಳ ಆಚರಣೆ ಹೆಚ್ಚು ಮಹತ್ವ ಪೂರ್ಣವಾದುದೆಂದು ತಿಳಿಸಿದರು ಹಾಗೂ ಎಲ್ಲರಿಗೂ ಶುಭವನ್ನು ಹಾರೈಸಿದರು.

ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ಬೆಳ್ಳೆ ಮತ್ತು ಶಾಂಕರತತ್ವ ಅಭಿಯಾನದ ಶ್ರೀ ಶ್ರೀಧರ ಶಾಸ್ತ್ರಿ ಇವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಸುಮಂಗಲಾ ಪ್ರಭಾಕರ್ ಅವರು ಕಾರ್ಯಕ್ರಮ ನಿರೂಪಿಸಿದರೆ, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ಇವರು ವಂದನಾರ್ಪಣೆಗೈದರು.

ಇಂದಿನ ಕಾರ್ಯಕ್ರಮದ ಬಗ್ಗೆ ಶ್ರೀ ಉಮೇಶ್ ಶೃಂಗೇರಿ ಇವರು ಮೆಚ್ಚುಗೆಯ ಮಾತುಗಳನ್ನಾಡಿದರು. ಸುವರ್ಣ ಭಾರತಿ ಮಹೋತ್ಸವವನ್ನು ಸ್ವಾತಂತ್ರ್ಯ ಉತ್ಸವದ ಜೊತೆ ಆಚರಿಸಿರುವುದು ಅದ್ಭುತ ಕಲ್ಪನೆಯಾಗಿದೆ. ಶ್ರೀ ಶಂಕರಾಚಾರ್ಯರು 'ಸ್ವದೇಶೋ ಭುವನತ್ರಯಂ' ಎಂದಿದ್ದಾರೆ ಎಂಬುದನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು.

ಈ ಮಾತು ನಮ್ಮ ಭಜನಾ ಕಾರ್ಯಕ್ರಮದ ಕಿರೀಟಕ್ಕೆ ಹೊಸದೊಂದು ಗರಿ ಮೂಡಿದಂತಿದೆ. ಇದನ್ನು ಆಯೋಜಿಸಲು ಉತ್ತಮ ಸಲಹೆ–ಸೂಚನೆಗಳಿಂದ ಮಾರ್ಗದರ್ಶನ ನೀಡಿ ಮುನ್ನಡೆಸುತ್ತಿರುವ ನಮ್ಮ ಭಜನಾ ಗುರುಗಳು ಶ್ರೀ ಸುಬ್ಬರಾವ್ ಇವರಿಗೆ ಸಮಾಜ ಬಾಂಧವರ ಪರವಾಗಿ ವಂದನೆಗಳು.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

## 'ಶಿವಸದನ'ದಲ್ಲಿ ಸ್ವಾತಂತ್ರ್ಯ ದಿನದ ಸಂಭ್ರಮ




ಪುತ್ತೂರು 'ಶಿವಸದನ' ಹಿರಿಯ ನಾಗರಿಕರ ಹಾಗೂ ವಿಕಲಚೇತನರ ವಸತಿ ನಿಲಯದಲ್ಲಿ ಸ್ವಾತಂತ್ರ್ಯದಿನದ ಸಿದ್ಧತೆ. ಅಂದರೆ ದೇಶ ಭಕ್ತಿಗೀತೆಗಳ ತರಬೇತಿ, ತ್ರಿವರ್ಣ ಧ್ವಜದ ಮೂರು ಬಣ್ಣಗಳುಳ್ಳ ಸೀರೆ ಧರಿಸುವ ಸಂಭ್ರಮ ನಮ್ಮ ಹಿರಿಯರಿಗೆ.

ರಾಷ್ಟ್ರಧ್ವಜಗಳಿಂದ ಅಲಂಕೃತಗೊಂಡು ಸ್ವಾತಂತ್ರ್ಯೋತ್ಸವ ನೆಲೆಯಲ್ಲಿ ಚಿತ್ರಗಳಿಗೆ ಬಣ್ಣ ತುಂಬಿಸುವುದು, ದೇಶಭಕ್ತಿ ಗೀತೆಗಳನ್ನು ಹಾಡುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರಾಷ್ಟ್ರಗೀತೆಯನ್ನು ಹಾಡಿ ಸಂಭ್ರಮಿಸಿದರು.

ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ದಂಪತಿಗಳ ಪುತ್ರಿ ಶ್ರೀಮತಿ ಅಂಕಿತ ಅನಂತಪುರ ಮತ್ತು ಶ್ರೀ ಸಂತೋಷ್ ಯು.ಎಸ್.ಎ., ಇವರ ಪುತ್ರ ಶ್ರೀ ಅದ್ರಿತ್ ಶಾಸ್ತ್ರೀ ಎಲ್ಲರಿಗೂ ವೈವಿಧ್ಯಮಯ ಸುಗ್ರಾಸ ಭೋಜನವನ್ನು ಏರ್ಪಡಿಸಿದ್ದರು.

ಡಾ। ಗಾನ ನೇತೃತ್ವದಲ್ಲಿ ಈ ಕಾರ್ಯಕ್ರಮ ಸಂಪನ್ನಗೊಂಡಿತು ಹಾಗೂ ಶ್ರೀ ಸುಬ್ರಹ್ಮಣ್ಯ ಸಭಾದ ಸದಸ್ಯರು ಪಾಲ್ಗೊಂಡಿದ್ದರು. ಇದೇ ರೀತಿ ಪ್ರತಿಯೊಬ್ಬರು ತಮ್ಮ ಅಮೂಲ್ಯ ಸಮಯವನ್ನು ಹಿರಿಯರೊಂದಿಗೆ ಹಂಚಿಕೊಂಡು ಸಂಭ್ರಮಿಸಬಹುದು.

## ❊❊❊ ಅಪಾರಕೀರ್ತಿ ಗಳಿಸಿ ❊❊❊



**ಡಾ। ಚೇತನ್ ಹೆಬ್ಬಾರ್ ಕೆ.** ವೈದ್ಯಕೀಯ ಅನಸ್ತೇಶಿಯಾ ವಿಭಾಗದಲ್ಲಿ ಪ್ರೊಫೆಸರ್ ವೈ. ಎಸ್. ಶರ್ಮ ಚಿನ್ನದ ಪದಕ ಪಡೆದಿದ್ದಾರೆ. ಇವರು ಕಬ್ಬಿನಾಲೆ ಕಜಾನೆ ಶ್ರೀ ಪರಮೇಶ್ವರ ಹೆಬ್ಬಾರ್ ಮತ್ತು ಶ್ರೀಮತಿ ಕಮಲಾಕ್ಷಿಯವರ ಸುಪುತ್ರ ಹಾಗೂ ಚಂಡೀಗಡ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ.



ಈ ಬಾರಿಯ ಸಿಎ ಅಂತಿಮ ಪರೀಕ್ಷೆಯಲ್ಲಿ **ಕು। ಶ್ರಾವಣಿ ಕೆ. ನಾಥ್** ಅವರು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಮಂಗಳೂರು ನಗರದ ಅನಂತ ಅಂಡ್ ಕೋ ಇಲ್ಲಿ ತರಬೇತಿ ಪಡೆದ ಅವರು ಶ್ರೀ ಕೇದಾರನಾಥ ಕಾಸರಗೋಡು ಹಾಗೂ ಶ್ರೀಮತಿ ಸ್ವಾತಿ ದಂಪತಿಯ ಪುತ್ರಿ.



**ಶ್ರೀ ತೇಜಸ್ ಪಣಂಬೂರ್** ಎ. ಐ. ವಿಭಾಗದಲ್ಲಿ ಪಿ.ಎಚ್.ಡಿ. ಪದವಿಯನ್ನು ಉಮಾರ್ ಅಮೆರಿಕ್ಷನಲ್ಲಿ ಪಡೆದಿದ್ದಾರೆ. ಇವರು ಶ್ರೀ ವಸಂತ್ ಪಣಂಬೂರ್ ಮತ್ತು ಶ್ರೀಮತಿ ರಾಜೇಶ್ವರಿ ಉಬರಳೆಯವರ ಸುಪುತ್ರ.

**PREETHIKA AUTOMOBILES**
*Wholesale & Retail Dealers in :*
**2 & 3 WHEELERS, SPARES & ACCESSORIES**
**KARANGALPADY, MANGALORE - 575 003**
✆ 2493633
9845851573
*Dealers in :*
**Minda Switches, M. K. Products, Swiss Auto Products, Power Coils**

# ಸುಸಂಸ್ಕೃತ ನಡೆನುಡಿಯ ಆದರ್ಶವ್ಯಕ್ತಿ ಪ್ರೊ. ಎಂ. ರಘುರಾಮ ಶರ್ಮ



ದಿನಾಂಕ 3–07–2024ನೇ ಬುಧವಾರ ನಮ್ಮನ್ನಗಲಿದ ಪ್ರೊ. ಎಂ. (ಮಂಕುಡೆ) ರಘುರಾಮ ಶರ್ಮರು ಓರ್ವ ಅಪೂರ್ವ ವ್ಯಕ್ತಿತ್ವದ ಸತ್‌ಚಿಂತಕರಾಗಿದ್ದರು. ಅವರು ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜಿನ ಸಂಸ್ಕೃತ ವಿಭಾಗದಲ್ಲಿ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ 35 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ, ನಿವೃತ್ತಿಯ ಬಳಿಕ ಮಂಗಳೂರಿನ ಕಂಕನಾಡಿಯ ತಮ್ಮ ಸ್ವಗೃಹದಲ್ಲಿ ನೆಲೆಸಿದ್ದರು. ಸಂಸ್ಕೃತದಲ್ಲಿ ಪಾಂಡಿತ್ಯ ಹೊಂದಿರುವ ಪ್ರೊ. ಶರ್ಮರು ಕಾಲೇಜಿನ ಇತರ ಕನ್ನಡ, ಹಿಂದಿ ಭಾಷಾ ಶಾಸ್ತ್ರಗಳ ಪ್ರಾಧ್ಯಾಪಕರುಗಳಿಗೂ ಸಂದರ್ಭಕ್ಕನುಗುಣವಾಗಿ ಸೂಕ್ತ ಮಾಹಿತಿ, ಜ್ಞಾನಗಳನ್ನು ನೀಡುತ್ತಿದ್ದರೆಂಬ ವಿಚಾರ ನನಗೂ ಸ್ನೇಹಿತರಾಗಿದ್ದ ಅವರ ಸಹೋದ್ಯೋಗಿಗಳು ಹೇಳುತ್ತಿದ್ದರು. ತಮ್ಮ ಸೇವಾ ಅವಧಿಯಲ್ಲಿ ದಕ್ಷ ಹಾಗೂ ಬದ್ಧತೆಯ ಸಂಸ್ಕೃತ ಬೋಧನೆ ಮಾತ್ರವಲ್ಲದೆ, ಕಾರ್ಕಳ ಪರಿಸರದಲ್ಲಿ ನಿರಂತರ ಹಲವು ಸಂಸ್ಕೃತ ಸಂಭಾಷಣ ಮತ್ತು ಯೋಗ ಶಿಬಿರಗಳನ್ನು ನಡೆಸಿ ಸಂಸ್ಕೃತ ಭಾಷೆ ಮತ್ತು ಯೋಗಕ್ಷೇತ್ರಗಳ ಬೆಳವಣಿಗೆಗೆ ಬಹುಮುಖ ಕೊಡುಗೆಗಳನ್ನು ನೀಡಿದ್ದಾರೆ. ಸರಳ, ಸಜ್ಜನಿಕೆಯ ಮತ್ತು ಮೃದುಸ್ವಭಾವ ಹೊಂದಿರುವ ಇವರು ಓರ್ವ ಮಹಾಮಹೋಪಾಧ್ಯಾಯರಾಗಿ ನಿರ್ಗಮಿಸಿದರು.

ಅಪಾರ ದೈವಭಕ್ತರೂ, ಅದ್ವೈತಾಭಿಮಾನಿಗಳೂ ಮತ್ತು ನಮ್ಮ ಸಮಾಜದ ಬಗ್ಗೆ ಅತ್ಯಂತ ಅಭಿಮಾನ ಹೊಂದಿದವರಾದ ಪ್ರೊ. ಶರ್ಮರ ವ್ಯಕ್ತಿತ್ವದಲ್ಲಿ ಸದಾ ಕಾಣುತ್ತಿದ್ದ ಒಂದು ಪ್ರಮುಖ ಅಂಶವೆಂದರೆ ಅವರ ಹಣೆಯಲ್ಲಿರುತ್ತಿದ್ದ ಭಸ್ಮದ ಮೂರು ಗುರುತುಗಳು. ಪ್ರಾತಿಭಾಸಿಕ, ವ್ಯವಹಾರಿಕ ಮತ್ತು ಪಾರಮಾರ್ಥಿಕ ಜ್ಞಾನ–ಸತ್ಯಗಳನ್ನು ಸೂಚಿಸುವ ಈ ಮೂರು ಭಸ್ಮದ ರೇಖೆಗಳ ವಿಚಾರಗಳಿಗೆ ಅನ್ವರ್ಥವಾಗಿ ಅವರು ಬದುಕಿ ಸರ್ವರ ಸ್ನೇಹ ಗೌರವಕ್ಕೆ ಪಾತ್ರರಾಗಿದ್ದರು.

ಸಂಬಂಧದಲ್ಲಿ ಪ್ರೊ. ಶರ್ಮರು ನನ್ನ ಚಿಕ್ಕಮ್ಮನ ಮಗ. ನಾನು ಬಾಲಕನಾಗಿದ್ದಾಗ ಹೆಜಮಾಡಿಯಲ್ಲಿ ಗೋಧೂಳಿ ಲಗ್ನದಲ್ಲಿ ನಡೆದ ಇವರ ಮದುವೆಯಲ್ಲಿ ಭಾಗವಹಿಸಿದ ನೆನಪು ಕೂಡ ಇನ್ನೂ ಹಸಿರಾಗಿದೆ. ಉತ್ತಮ ಕೌಟುಂಬಿಕ ಮೌಲ್ಯಗಳ ಪ್ರತೀಕರಾದ ಇವರ ಬಂಧುತ್ವ ಪ್ರೀತಿ ಎಲ್ಲರಿಗೂ ಅನುಸರಣೀಯವಾಗಿದೆ. ರಜಾ ಕಾಲದಲ್ಲಿ ಎಲ್ಲಾ ನಿಕಟ ಸಂಬಂಧಿಕರ ಮನೆಗಳಿರುವ ಉದ್ಯಾವರ, ಉಚ್ಚಿಲ, ಮುದರಂಗಡಿ, ಹಳೆಯಂಗಡಿ, ಎಕ್ಕಾರು, ಮಂಗಳೂರುಗಳಿಗೆ ಆಗಿನ ಕಾಲದ ತಮ್ಮ 'ಲ್ಯಾಂಬ್ರೇಟ ಸ್ಕೂಟರ್' ಅಲ್ಲಿ ಪತ್ನಿ ಸಮೇತರಾಗಿ ಭೇಟಿ ನೀಡುವ ಒಂದು ರೂಢಿಯನ್ನು ಬೆಳೆಸಿಕೊಂಡಿರುವುದು ಅವರ ವಾತ್ಸಲ್ಯ ಹೃದಯಕ್ಕೆ ಸಾಕ್ಷಿಯಾಗಿದೆ. ಹಾಗೆಯೇ ಒಡನಾಟದಲ್ಲಿದ್ದಾಗಿನ ಇನ್ನೊಂದು ಘಟನೆ ಎಂದರೆ 1979ರಲ್ಲಿ ನಾನು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಅಧ್ಯಯನ ನಡೆಸುತ್ತಿದ್ದ ಸಂದರ್ಭ, ರಜೆಯಲ್ಲಿ ಅವರ ಮನೆಗೆ ಭೇಟಿ ನೀಡಿದ್ದೆ. ಮರುದಿನ ಬರುವಾಗ ಚಿಕ್ಕಪ್ಪ, ಚಿಕ್ಕಮ್ಮನ ಮೂಲಕ ನನ್ನ ಕಿಸೆಗೆ ಸ್ವಲ್ಪ ದುಡ್ಡನ್ನು ಹಾಕಿದರು. ನಾನು ಬೇಡವೆಂದಾಗ, ವಿದ್ಯಾರ್ಥಿಗಳು ಅವಲಂಬಿತರು ಎಂಬ ಅರ್ಥದಲ್ಲಿ ಅವರಿಬ್ಬರೂ ನನಗೆ ಹೇಳಿದ ಮಾತುಗಳು 'ನೀನು ವಿದ್ಯಾರ್ಥಿ. ವಿದ್ಯಾರ್ಥಿಗಳಿಗೆ ಖರ್ಚುಗಳಿರುತ್ತವೆ. ನೀನು ಬೇಡವೆಂದು ಹೇಳಬಾರದು' ಎಂದರು. ವಿದ್ಯಾರ್ಥಿಗಳ ಬಗ್ಗೆ ಅತೀವ ಕಾಳಜಿ ಹೊಂದಿದ ಚಿಕ್ಕಪ್ಪ ಪ್ರೊ. ಶರ್ಮರು ಹೀಗೆ ಅನೇಕ ವಿದ್ಯಾರ್ಥಿಗಳಿಗೆ ವಿಭಿನ್ನ ರೀತಿಯಲ್ಲಿ ಸಹಾಯ ಮಾಡುವ ಮತ್ತು ಎಲ್ಲರ ಒಳಿತನ್ನು ಬಯಸುವ ಅವರ ಉದಾರಗುಣ ನನಗೆ ಕೆಲವು ಸಮಯದ ನಂತರ ತಿಳಿಯಿತು. ಹಾಗೆಯೇ, ನಾನು ಡಾಕ್ಟರೇಟ್ ಪದವಿ ಪಡೆದ ಹಾಗೂ ಪ್ರಾಂಶುಪಾಲರಾಗಿ ಬಡ್ತಿ ಹೊಂದಿದ ವೇಳೆ ಚಿಕ್ಕಪ್ಪ ಅತ್ಯಂತ ಖುಷಿಪಟ್ಟು ಅಭಿನಂದಿಸಿರುವ ಸಂದರ್ಭಗಳೂ ನನಗೆ ಇನ್ನೂ ನೆನಪಿದೆ. ಸನ್ನಡತೆಯನ್ನು ಪ್ರತಿಪಾದಿಸಿದ ಪ್ರೊ. ಶರ್ಮರು ಇನ್ನಿಲ್ಲ ಎನ್ನುವ ಶೂನ್ಯ ಸ್ಥಿತಿಯ ಭಾವನೆ ಮೂಡುವುದು ಸಹಜ. ಮಹಾತ್ಮಗಾಂಧಿಯವರು ಒಂದು ಕಡೆ ಈ ರೀತಿ ಬರೆಯುತ್ತಾರೆ 'In the midst of death, life persists. In the midst of untruth, truth persists. In the midst of darkness, light persists.' ನಾವು ಕಷ್ಟದ ಪರಿಸ್ಥಿತಿಗಳನ್ನೆಲ್ಲಾ ಎದುರಿಸುವ ಸಂದರ್ಭ ಧನಾತ್ಮಕ ದೃಷ್ಟಿಕೋನ ಹೊಂದಿರಬೇಕೆಂಬ ಗಾಂಧೀಜಿಯವರ ಈ ಸಾಲುಗಳು ಪ್ರೊ. ಶರ್ಮರ ಅಗಲಿಕೆಯಿಂದ ಉಂಟಾದ ನಿರ್ವಾತ ಸ್ಥಿತಿಗೆ ಒಂದು ಸಮಾಧಾನಕರ ಉತ್ತರವಾದೀತು. ನಮ್ಮ ದೃಷ್ಟಿಯಿಂದ ಅವರು ದೂರವಾದರೂ ನಮ್ಮ ಹೃದಯದಿಂದ ಅವರು ಎಂದೂ ದೂರವಾಗುವುದಿಲ್ಲ. ಅವರ ಶ್ರೇಷ್ಠ ಸಂಸ್ಕಾರ, ಸುಸಂಸ್ಕೃತ ನಡೆ–ನುಡಿಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿ ಬೆಳೆಸಿಕೊಂಡಾಗ ಪ್ರೊ. ಶರ್ಮರು ನಮ್ಮ ಮಧ್ಯೆ ಜೀವಂತವಾಗಿರುತ್ತಾರೆ. ಅಗಲಿದವರ ಬದುಕು ಬದುಕಿರುವವರ ನೆನಪಿನಲ್ಲಿರುತ್ತದೆ ಎಂಬ ಮಾತುಗಳು ನಮ್ಮ ಖ್ಯಾತ ಇಂಗ್ಲಿಷ್ ಕವಯಿತ್ರಿ ಜಾರ್ಜ್ ಇಲಿಎಟ್ ಹೇಳುವಂತೆ 'Our death are never dead to us until we have forgotten them.' ಈ ಮಾತುಗಳಂತೆ ಪ್ರೊ. ಶರ್ಮರು ನಮಗೆ ಸದಾ ಸ್ಮರಣೀಯರಾಗಿರುತ್ತಾರೆ.

ಪ್ರೊ. ಶರ್ಮರ ಅಗಲುವಿಕೆಯಿಂದಾಗಿ ಸಂಸ್ಕೃತ ಭಾಷೆ, ಸಾಹಿತ್ಯ, ಯೋಗ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಿಗೆ ಅಪಾರ ನಷ್ಟವಾಗಿದೆ. ಮೃತರು ಪತ್ನಿ ಶ್ರೀಮತಿ ರಾಧಾ ಶರ್ಮ, ಪುತ್ರ ಸುಬ್ರಹ್ಮಣ್ಯ ಸಭಾದ ಜೊತೆ ಕಾರ್ಯದರ್ಶಿ ಚೇತನ್ ಶರ್ಮ, ಪುತ್ರಿಯರಾದ ಶ್ರೀಲತಾ, ಗಾಯತ್ರಿ, ಸ್ವರ್ಣಗೌರಿ ಮತ್ತು ಸಂಗೀತ ಸಹಿತ ಅಪಾರ ಸಂಖ್ಯೆಯ ವಿದ್ಯಾರ್ಥಿಗಳನ್ನು ಹಾಗೂ ಬಂಧು–ಬಾಂಧವರನ್ನು ಅಗಲಿದ್ದಾರೆ. ನಮ್ಮನ್ನಗಲಿದ ಪ್ರೊ. ಎಂ. ರಘುರಾಮ ಶರ್ಮರ ದಿವ್ಯಾತ್ಮಕ್ಕೆ ಸದ್ಗತಿ ಲಭಿಸಲೆಂದು ನನ್ನ ಪ್ರಾರ್ಥನೆ.

**ಲೇಖಕ : ಡಾ। ವೈ. ರವೀಂದ್ರನಾಥ ರಾವ್, ಬ್ರಹ್ಮಾವರ**


**ಕೃಪೆ : ಶ್ರೀ ಶಾರದಾ ಮಾಸಪತ್ರಿಕೆ**

# ನಮ್ಮ ಹಿರಿಯ ಪುರೋಹಿತರು ಭಟ್ರಪಾಡಿ ಜಗದೀಶ ಭಟ್ಟರ ಹಿರಿಯ ಚೇತನಕ್ಕೆ ನಮನಗಳೊಂದಿಗೆ

ಕಳೆದ ಕೆಲವಾರು ವರ್ಷಗಳಿಂದ ನಮ್ಮ ಮನೆಯ ಎಲ್ಲಾ ಪೂಜೆ, ಹೋಮ–ಹವನಗಳಿಗೆ ಅಧ್ವರ್ಯುವಾಗಿ ಮಾರ್ಗದರ್ಶನ ಮಾಡುತ್ತಾ ನಮ್ಮನ್ನು ಮುನ್ನಡೆಸಿದವರು ಜಗದೀಶಣ್ಣ.... ಅವರು ಕಾರ್ಯಕ್ರಮಕ್ಕೆ ಒಮ್ಮೆ ಒಪ್ಪಿಕೊಂಡರೆ ತಾನು ತಾಸು ಮುನ್ನವೇ ಬರುವವರು. ಜಾನೆ ಅಣ್ಣ.. ಎಂಚ ಉಳ್ಳರ್ ಮಾಂತ... ಎಂದು ಮಾತು ಆರಂಭಿಸಿದರೆ ಉಳಿದಂತೆ ಗಂಭೀರವದನ... ಅವರಾಯಿತು.. ಅವರ ಕೆಲಸವಾಯಿತು.

ಪೂಜೆ, ಹೋಮಕ್ಕೆ ಕುಳಿತ ನಂತರವಂತೂ ಅನವಶ್ಯಕ ಮಾತುಕತೆಗಳಿಂದ ಅವರು ಬಲುದೂರ... ಉಳಿದವರು ಮಾತನಾಡುತ್ತಿದ್ದರೆ ಬೇಸರ ಪಟ್ಟುಕೊಳ್ಳುತ್ತಿದ್ದ, ಒಮ್ಮೊಮ್ಮೆ ಸಿಟ್ಟು ಪ್ರದರ್ಶಿಸುತ್ತಿದ್ದ ಜೀವ.... ಏಕಾಗ್ರತೆಯಿಂದ ಕಾರ್ಯಕ್ರಮಗಳನ್ನು ನಡೆಸಿಕೊಡುವುದು ಅವರ ಜಾಯಮಾನ.. ಪೂಜೆ, ಹೋಮದ ಕರ್ತೃವೂ ಅವರಂತೆ ಗಂಭೀರವಾಗಿ ಕುಳಿತು ಕಾರ್ಯಕ್ರಮದಲ್ಲಿ ಭಾಗಿ ಆದರೆ ಮಾತ್ರ ಅವರಿಗೆ ಸಮಾಧಾನ... ಒಮ್ಮೆ ಯಾವುದೇ ಕಾರ್ಯಕ್ರಮಕ್ಕೆ ಒಪ್ಪಿಕೊಂಡರೆ ಮತ್ತೆ ಎಂತಹ ಅನಿವಾರ್ಯತೆ ಬಂದರೂ ಅದನ್ನು ರದ್ದುಪಡಿಸಿ ಇನ್ನೊಬ್ಬರ ಮನೆಯ ಕಾರ್ಯಕ್ರಮಗಳಿಗೆ ಒಪ್ಪಿಕೊಳ್ಳುವವರು ಅಲ್ಲವೇ ಅಲ್ಲ. ಪೂಜೆ ಆರಂಭದ ಪ್ರಾರ್ಥನೆ, ಕೊನೆಯ ನಿವೇದನೆ ಅವರ ಗಂಭೀರ ಸ್ವರದಲ್ಲಿಯೇ ಆಲಿಸಬೇಕು. ದುರ್ಗಾ ನಮಸ್ಕಾರ ಪೂಜೆಯ ನಂತರದ ಸ್ತೋತ್ರಗಳನ್ನು, ಅದರಲ್ಲೂ ದೇವಿ ಕ್ಷಮಾಪಣಾ ಮಂತ್ರದ ಸ್ತೋತ್ರವನ್ನು ಅವರಂತೆ ಭಕ್ತಿ–ಭಾವದಿಂದ ಹೇಳುವ ಅನ್ಯರನ್ನು ಕಾಣುವುದು ಅಸಾಧ್ಯ.

ನಿಶ್ಶಬ್ದ ವಾತಾವರಣದಲ್ಲಿ ಜಗದೀಶಣ್ಣ ಮನದುಂಬಿ ಭಕ್ತಿ ಭಾವದಿಂದ ಶ್ಲೋಕ ಹೇಳುತ್ತಿದ್ದರೆ ರೋಮಾಂಚನದೊಂದಿಗೆ ನಾವೆಲ್ಲ ಪುಳಕಿತರಾಗುತ್ತಿದ್ದೆವು. ಸಂಭಾವನೆಯ ವಿಚಾರದಲ್ಲೂ ನಮ್ಮಲ್ಲಂತೂ ಜಗದೀಶಣ್ಣ ಎಂದೂ ಮಾತೆತ್ತಿದವರಲ್ಲ. ಕೊಳ್ಳೆಣ್ಣ... ಎಂದು ಎನ್ನುತ್ತಾ ಪ್ರೀತಿಯಿಂದ ಕೊಟ್ಟಿದ್ದನ್ನು ಆತ್ಮೀಯತೆಯಿಂದ ಸ್ವೀಕರಿಸಿ ದೇವೆರ್ ಎಡ್ಡೆ ಮಂಪಡಣ್ಣ... ಎಂದು ಹರಸಿಯಾರು. ಜಗದೀಶಣ್ಣನ ಮನೆಗೆ ಹೋದರಂತೂ ಅವರು ಮತ್ತವರ ಪತ್ನಿ ಬಹಳ ಆತ್ಮೀಯತೆಯಿಂದ ಯಾವಾಗಲೂ ಉಪಚರಿಸುವವರು.... ಯಕ್ಷಗಾನದ ಬಗ್ಗೆ ಅಪಾರ ಪ್ರೀತಿ–ಗೌರವದಿಂದ ತನ್ನ ಬಿಡುವಿನ ವೇಳೆಯಲ್ಲಿ ಅಸ್ವಾದಿಸುವವರು ಅವರು... ಕಲಾವಿದರ ಬಗ್ಗೆಯೂ ಅಷ್ಟೇ ಪ್ರೀತಿ ಗೌರವ. ತನ್ನ ಮನೆಯ ಕಾರ್ಯಕ್ರಮಗಳಲ್ಲೂ ಯಕ್ಷಗಾನಗಳನ್ನು ನೆರವೇರಿಸಿ ಸಂತಸಪಟ್ಟವರು..



ತಾನು ಆರೋಗ್ಯದಿಂದಿರುವಾಗಲೇ ಮನೆಯ ಹಾಗೂ ಪೌರೋಹಿತ್ಯದ ಜವಾಬ್ದಾರಿಗಳನ್ನು ಮಗ ದೇವರಾಜರಿಗೆ ಒಪ್ಪಿಸಿ, ಇತ್ತೆ ಆಯೆ ಮಂತೊಂದು ಪೋಪೆ ಅಣ್ಣ... ಎಂದು ಹೇಳುತ್ತಾ ನೆಮ್ಮದಿ ಕಂಡವರು.

ನಿಷ್ಠೆಯಿಂದ ಅವರು ನಡೆಸಿಕೊಟ್ಟ ಕಾರ್ಯಕ್ರಮಗಳ ಫಲಗಳ ಬಗ್ಗೆ ನಮ್ಮಲ್ಲೂ, ನಮ್ಮ ಇತರ ಬಂಧುಗಳಲ್ಲೂ ಹೇಳಲು ಸಾಕಷ್ಟು ಉದಾಹರಣೆಗಳಿವೆ. ಹಿರಿಯ ಪುರೋಹಿತರಾದ ಅವರು ತನಗಿಂತ ಕಿರಿಯರಿಗೂ ಬಹುವಾದ ಗೌರವ ನೀಡುತ್ತಿದ್ದವರು. ನಮ್ಮ ಸಮಾಜದವರು ಮಾತ್ರ ಅಲ್ಲ ಅನ್ಯ ಸಮಾಜದವರು ಕೂಡ ಅವರ ಮನೆಗೆ ಬಂದು ತಮ್ಮಲ್ಲಿ ಆಗಬೇಕಾದ ಮತ್ತು ಸಾರ್ವಜನಿಕವಾಗಿಯೂ ಆಗಬೇಕಾದ ಕೆಲವು ಕಾರ್ಯಕ್ರಮಗಳಿಗೆ ಅವರನ್ನು ಪೌರೋಹಿತ್ಯಕ್ಕೆ ಕರೆಯುತ್ತಿದ್ದರು. ಅಲ್ಲಿಯೂ ಜಗದೀಶಣ್ಣ ಶ್ರದ್ಧೆಯಿಂದ ನಿರ್ವಹಿಸಿ ನಮ್ಮ ಸಮಾಜಕ್ಕೆ ಗೌರವ ತಂದವರು. ಇವರು ತಾ. 30–6–2024ನೇ ರವಿವಾರ ತಮ್ಮ 77ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಒಟ್ಟಿನಲ್ಲಿ ಸಮಾಜದ ಏಳಿಗೆಗೆ ನಿರಂತರವಾಗಿ ಶ್ರಮಿಸಿದ ಹಿರಿಯ ಪುರೋಹಿತರಾದ ಜಗದೀಶಣ್ಣ ಇನ್ನು ಕೇವಲ ನೆನಪು ಮಾತ್ರ... ಅವರಿಗೆ ಭಗವಂತ ಸಾಯುಜ್ಯ ಪದವನ್ನು ಕರುಣಿಸಲಿ ಎಂಬುದು ನಮ್ಮೆಲ್ಲರ ಮನದಾಳದ ಪ್ರಾರ್ಥನೆ.

# ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಮಂಗಳೂರು
## ಆರೋಗ್ಯ ಕಾರ್ಡ್ ವಿತರಣಾ ಕಾರ್ಯಕ್ರಮ




ಮಹಾಮಂಡಲದ ವತಿಯಿಂದ ನಡೆದ (ಉಡುಪಿ ಕಾರ್ಕಳ ಮತ್ತು ಬ್ರಹ್ಮಾವರ ಸಂಘದ) ಆರೋಗ್ಯ ಕಾರ್ಡ್ ವಿತರಣಾ ಕಾರ್ಯಕ್ರಮವು ಉಡುಪಿ 'ಶಾರದಾ ಮಂಟಪದ ಪದ್ಮನಾಭ ಹಾಲ್'ನಲ್ಲಿ ನಡೆಯಿತು.

ಡಾ. ವೈ. ವಿಜಯ ರಾವ್ ಪ್ರಾರ್ಥನೆ ನಡೆಸಿದರು. ಮಹಾಮಂಡಲದ ಅಧ್ಯಕ್ಷರಾದ ಶ್ರೀ ಮಂಜುನಾಥ್ ಹೆಬ್ಬಾರ್ ಎಲ್ಲರನ್ನೂ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಡಾ. ಪಿ. ಜಿ. ರಾವ್ ಮತ್ತು ಡಾ। ಶ್ಯಾಮ್ ರಾವ್ ಆರೋಗ್ಯ ಮತ್ತು ಆರೋಗ್ಯ ಕಾರ್ಡ್ ಮಹತ್ವ ತಿಳಿಸಿದರು. ಜೊತೆ ಕಾರ್ಯದರ್ಶಿ ಶ್ರೀ ಕೇಶವ ರಾವ್ ಆರೋಗ್ಯ ಕಾರ್ಡ್ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಿದರು. ವೇದಿಕೆಯಲ್ಲಿ ಮಹಾಮಂಡಲದ ಕೋಶಾಧಿಕಾರಿ ಶ್ರೀ ಉದಯ ಕುಮಾರ್ ಬಾರ್ಕೂರ್ ಮತ್ತು ಬ್ರಹ್ಮಾವರ ಸಂಘದ ಅಧ್ಯಕ್ಷರಾದ ಶ್ರೀ ಶಂಭುಶಂಕರ ರಾವ್ ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳನ್ನು ಫಲಪುಷ್ಪ ನೀಡಿ ಗೌರವಿಸಲಾಯಿತು ಮತ್ತು ಆರೋಗ್ಯ ಕಾರ್ಡ್‌ಗೆ ಹೆಚ್ಚು ಮುತುವರ್ಜಿವಹಿಸಿ ಕಾರ್ಡ್ ಮಾಡಿಸಿದ ಉಡುಪಿಯಿಂದ ಶ್ರೀ ವಿನೋದ್ ಕುಮಾರ್ ಬ್ರಹ್ಮಾವರ ಸಂಘದಿಂದ ಚಂದ್ರಿಕಾ ಕೆ. ಹಾಗೂ ಕಾರ್ಕಳ ಸಂಘದ ಶ್ರೀ ಸತೀಶ್ ರಾವ್ ಇವರನ್ನು ಗೌರವಿಸಲಾಯಿತು.

ಹೊಸ ಪ್ರೈಮ್ ಮೆಂಬರರಾದ ಶ್ರೀ ಪ್ರಕಾಶ್ ಹೆಬ್ಬಾರ್, ಶ್ರೀ ಅಜಿತ್ ಕುಮಾರ್ ಅವರನ್ನು ಗೌರವಿಸಲಾಯಿತು.


ಕೊನೆಯಲ್ಲಿ ಮಹಾಮಂಡಲದ ಕಾರ್ಯದರ್ಶಿ ಶ್ರೀ ಮುರಳೀಧರ ಶರ್ಮ ಧನ್ಯವಾದವನ್ನಿತ್ತರು. ನಮ್ಮ ಪ್ರೈಮ್ ಮೆಂಬರ್ ಆದ ಡಾ। ರವೀಂದ್ರನಾಥ ರಾವ್, ಶ್ರೀ ಕಿಶೋರ್ ಕುಮಾರ್, ಶ್ರೀ ಗಣೇಶ್ ರಾವ್ ಕುಂಬಾಶಿ, ಶ್ರೀ ಪ್ರಭಾಕರ ಭಂಡಿ, ಮೂರು ಸಂಘದ ಕಾರ್ಯದರ್ಶಿಗಳು ಮತ್ತು ಪದಾಧಿಕಾರಿಗಳು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಉಪಸ್ಥಿತರಿದ್ದರು. ಶ್ರೀ ಕೃಷ್ಣಕುಮಾರ್ ಮಟ್ಟು ಕಾರ್ಯಕ್ರಮ ನಿರೂಪಿಸಿದರು.

## ಸನ್ಮಾನ



ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.) ಮೂಡುಬಿದ್ರಿ ಇದರ ವಾರ್ಷಿಕ ಸಭೆಯಲ್ಲಿ ತಾರೀಕು 28–7–2024ರಂದು **ಕು। ಶ್ರೀಜಾ ಹೆಬ್ಬಾರ್** ದ್ವಿತೀಯ ಪಿಯುಸಿ ರಾಜ್ಯಮಟ್ಟದಲ್ಲಿ 8ನೆಯ ರ್‍ಯಾಂಕ್ ಹಾಗೂ **ಕು। ವೈಷ್ಣವಿ ರಾವ್ ಬಿ.** ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ 8ನೆಯ ರ್‍ಯಾಂಕ್ ಪಡೆದಿರುವ ಇವರನ್ನು ವಿಶೇಷ ಅಭಿನಂದನೆಯ ಮೂಲಕ ಗೌರವಿಸಲಾಯಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...




ಸಾಲಿಗ್ರಾಮ ದಿ। ನಾಗರಾಜ್ ಹೆಬ್ಬಾರ್‌ರವರ ಜೇಷ್ಠ ಪುತ್ರ **ಶ್ರೀ ಅಣ್ಣಪ್ಪಯ್ಯ ಹೆಬ್ಬಾರ್** ಇವರು ತಾರೀಕು 05–08–2024ನೇ ಸೋಮವಾರ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



**ಎಲ್ಲೂರು ಶ್ರೀ ಕಾರ್ತಿಕ್** (46) ತಾರೀಕು 4–8–2024ನೇ ರವಿವಾರ ಕುಂದಾಪುರದಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



**ಉಚ್ಚಿಲ ಶ್ರೀ ಸದಾಶಿವ ರಾವ್** ತಾರೀಕು 11–8–2024ನೇ ರವಿವಾರ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಮೂವರು ಪುತ್ರಿಯರನ್ನು ಅಗಲಿದ್ದಾರೆ.

***



ಶ್ರೀ ಡಿ. ಪದ್ಮನಾಭ ರಾವ್ ಇವರ ಧರ್ಮಪತ್ನಿ **ಶ್ರೀಮತಿ ದುರ್ಗಾವತಿ** (80) ತಾರೀಕು 9–8–2024ನೇ ಶುಕ್ರವಾರ ವಿಟ್ಲದಲ್ಲಿ ನಿಧನ ಹೊಂದಿದರು. ಇವರು ಪತಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



**ಬೆಳ್ಳೆ ಶ್ರೀ ಅರುಣ್ ರಾವ್** (68) ತಾರೀಕು 7–8–2024ನೇ ಬುಧವಾರ ಪಡುಬೆಳ್ಳೆಯಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು



PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001



ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್



ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216





Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works



## ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.) ಮೂಡಬಿದ್ರಿ – 'ಆಟಿಡೊಂಜಿ ದಿನ'




ಪ್ರತಿ ವರ್ಷದಂತೆ ಈ ಬಾರಿಯೂ ತಾರೀಕು 28–7–2024ನೇ ರವಿವಾರ ಬೆಳಗ್ಗೆ ಗಂಟೆ 10–00ಕ್ಕೆ ಸರಿಯಾಗಿ ಮೂಡಬಿದ್ರಿ ಕಡಲಕೆರೆ 'ಪ್ರೀತಮ್ ಗಾರ್ಡನ್'ನಲ್ಲಿ ನಮ್ಮ ಪರಿಷತ್ತಿನ ವಾರ್ಷಿಕ ಸಭೆ ಮತ್ತು 'ಆಟಿಡೊಂಜಿ ದಿನ' ಕಾರ್ಯಕ್ರಮವು ಚಾರ್ವಿ ಮತ್ತು ಶುಭಾಂಜನರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಅಭ್ಯಾಗತರಾದ ಶ್ರೀ ವಸಂತ ಭಟ್ ನಾರಾವಿ, ಶ್ರೀ ಮಂಜುನಾಥ್ ಹೆಬ್ಬಾರ್ ಉಡುಪಿ, ಶ್ರೀಮತಿ ಶಾಂತ ಗಣೇಶ ರಾವ್ ಕುಂಭಾಶಿ, ಶ್ರೀ ಸೀತಾರಾಮ್ ಹೆಬ್ಬಾರ್ ಕಬ್ಬಿನಾಲೆ ದೀಪ ಬೆಳಗಿಸಿ ಶುಭಾಶಯದ ಮಾತುಗಳನ್ನು ಆಡಿದರು. ಶ್ರೀ ಎಂ. ದೇವಾನಂದ ಭಟ್ ಇವರು ಅಧ್ಯಕ್ಷೀಯ ಭಾಷಣ ಮಾಡಿ ಪರಿಷತ್ತಿನ ಬೆಳವಣಿಗೆಗೆ ಎಲ್ಲರ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು. ನಮ್ಮ ಸಮಾಜದ ಹಿರಿಯರಾದ ಶ್ರೀ ಯು. ಸುರೇಶ್ ಕುಮಾರ್ ಲಾಡಿ ಇವರನ್ನು ಸನ್ಮಾನಿಸಲಾಯಿತು. ಅಲ್ಲದೆ ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀ ಸುರೇಶ ರಾವ್ ಬೊಕ್ಕಸ ವಾಚಿಸಿದರು, ಖಜಾಂಚಿ ಶ್ರೀ ವಸಂತರಾಜ ಬಿ. ಕೆ. ಲೆಕ್ಕಪತ್ರ ಮಂಡಿಸಿದರು. ಬೊಕ್ಕಸ ಶ್ರೀ ಚಂದ್ರಶೇಖರ ರಾವ್ ಧನ್ಯವಾದವನ್ನಿತ್ತರು. ಸಮಾಜದ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಮಂಡಳಿಯ ಸದಸ್ಯರಿಂದ ಕದಂಬ – ಕೌಶಿಕೆ ಎಂಬ ಯಕ್ಷಗಾನ ಪ್ರದರ್ಶನ ನಡೆಯಿತು ಹಾಗೂ ಆಟಿದ ಕೂಟದ ವಿಶೇಷ ಭೋಜನ ಕೂಡ ಆಯೋಜಿಸಲಾಗಿತ್ತು. ಪುತ್ತಿಗೆ ಶ್ರೀ ಆದರ್ಶ ರಾವ್ ಮತ್ತು ಶ್ರೀ ಜಯರಾಮ ರಾವ್ ಬಿ. ಕಾರ್ಯಕ್ರಮ ನಿರೂಪಣೆ ಮಾಡುವುದರೊಂದಿಗೆ ವಿಮಲಾ ರಾವ್ ಪುತ್ತಿಗೆ ಪದವು, ವಾಣಿ ರಾವ್ ಶಿರ್ತಾಡಿ, ಶುಭಾ ರಾವ್, ಶ್ರೀ ಶ್ರೀನಿವಾಸ ರಾವ್ ಪುತ್ತಿಗೆ, ಜ್ಯೋತಿ ರಾವ್, ಶ್ರೀ ಗಗನ್ ರಾವ್ ಅಲ್ಲದೆ ಎಲ್ಲರೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದರು. ಎಲ್ಲರಿಗೂ ಪರಿಷತ್ತು ಆಭಾರಿಯಾಗಿದೆ.

## ಜೀವ ರಕ್ಷಣೆ ತರಬೇತಿ



ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ತಾರೀಕು 21–7–2024ರಂದು ನಡೆದ 'ಆಟಿತೊ ಆಟ ಕೂಟ' ಕಾರ್ಯಕ್ರಮದಲ್ಲಿ ಕೆ.ಎಂ.ಸಿ. ಅತ್ತಾವರದ ಹಿರಿಯ ವೈದ್ಯಾಧಿಕಾರಿ ಡಾ। ಸೋನಲ್ ಭಟ್ ಮತ್ತು ತಂಡದಿಂದ 'ತುರ್ತು ಸಂದರ್ಭಗಳಲ್ಲಿ ಜೀವ ರಕ್ಷಣೆ' ಒಂದು ವಿಶೇಷ ಸಮಾಜಮುಖಿ ತರಬೇತಿ ಪ್ರಾತ್ಯಕ್ಷಿಕೆಯೊಂದಿಗೆ ನಡೆಯಿತು. ಸದಸ್ಯರಿಗೆ ಮನದಟ್ಟಾಗುವಂತೆ ತಮ್ಮ ಸುಲಲಿತ ಮತ್ತು ಸಾಮಾನ್ಯ ಪರಿಭಾಷೆಯಲ್ಲಿ ವೈದ್ಯಕೀಯ ಸಲಹೆಗಳನ್ನು ನೀಡಿದ ಡಾ। ಸೋನಲ್ ಭಟ್ ಹಲವಾರು ಸದಸ್ಯರ ಸಂಶಯಗಳಿಗೆ ಸೂಕ್ತವಾದ ಉತ್ತರ ನೀಡಿದರು. ಬಳಿಕ ಶ್ರೀ ಸಭಾದ ವತಿಯಿಂದ ಅವರನ್ನೂ ಮತ್ತು ಅವರ ತಂಡದವರನ್ನು ಗೌರವಿಸಲಾಯಿತು. ಅವರ ಪತಿ ಪ್ರಖ್ಯಾತ ವೈದ್ಯರಾದ ಡಾ। ಗಿರೀಶ್ ಎಂ. ಸಭೆಯಲ್ಲಿ ಉಪಸ್ಥಿತರಿದ್ದರು. ***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***

## ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಋಗುಪಾಕರ್ಮ



ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇಲ್ಲಿ ತಾ. 19–08–2024ನೇ ಸೋಮವಾರ ಬೆಳಗ್ಗೆ **ಋಗುಪಾಕರ್ಮ** ವೇ। ಮೂ। ರವಿ ಉಪಾಧ್ಯಾಯ ಹಾಗೂ ವೇ। ಮೂ। ಸುಬ್ರಹ್ಮಣ್ಯ ಉಪಾಧ್ಯಾಯ ಪೌರೋಹಿತ್ಯದಲ್ಲಿ ಧಾರ್ಮಿಕ ವಿಧಿ–ವಿಧಾನದೊಂದಿಗೆ ನೆರವೇರಿತು. 75ಕ್ಕೂ ಹೆಚ್ಚು ಸಮಾಜ ಬಾಂಧವರು ಭಾಗವಹಿಸಿದ್ದರು.

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ




ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಯೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241


PRAMOD
AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

Muralidhara Rao Adyapadi
Proprietor
Mob : 94480 27259
99803 16434

SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

# ಪಾವಂಜೆ ಶ್ರೀ ಹನುಮ ಸನ್ನಿಧಿಯಲ್ಲಿ ಭಜನಾ ಕಾರ್ಯಕ್ರಮ



ತಾರೀಕು **10-08-2024**ನೇ ಶನಿವಾರ
ಪಾವಂಜೆ ಶ್ರೀ ಹನುಮ ಸನ್ನಿಧಿಯಲ್ಲಿ
ಶ್ರೀ ಸುಬ್ರಹ್ಮಣ್ಯ ಸಭಾ ಭಜನಾ ಮಂಡಳಿಯ
**ಭಜನಾ ಸೇವೆ**
ಜರಗಿತು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್







Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*